(ಸದನವು ಬೆಳಿಗ್ಗೆ 11 ಗಂಟೆ 13 ನಿಮಿಷಗಳಿಗೆ ಸಮಾವೇಶಗೊಂಡಿತು)

ಮಾನ್ಯ ಸಭಾಧ್ಯಕ್ಷರು ಅಧ್ಯಕ್ಷರ ಪೀಠವನ್ನು ಅಲಂಕರಿಸಿದ್ದರು.

1. ಪ್ರಕಟಣೆ

ವಿಷಯ : ಮಾಜಿ ಮುಖ್ಯಮಂತ್ರಿಗಳಾದ ಶ್ರೀ ಹೆಚ್.ಡಿ. ಕುಮಾರಸ್ವಾಮಿಯವರಿಗೆ ಹುಟ್ಟುಹಬ್ಬದ ಶುಭಾಶಯಗಳು.

ಅಧ್ಯಕ್ಷರು : ಈ ದಿನ ದಿನಾಂಕ : 16-12-2014 ರಂದು ಹುಟ್ಟುಹಬ್ಬವನ್ನು ಆಚರಿಸಿಕೊಳ್ಳುತ್ತಿರುವ ಸದನದ ಸದಸ್ಯರು ಹಾಗೂ ಮಾಜಿ ಮುಖ್ಯಮಂತ್ರಿಗಳಾದ ಶ್ರೀ ಹೆಚ್.ಡಿ. ಕುಮಾರಸ್ವಾಮಿ ಅವರಿಗೆ ಜನ್ಮದಿನದ ಶುಭಾಶಯಗಳು. ಈ ಸಂದರ್ಭದಲ್ಲಿ ಅವರಿಗೆ ಭಗವಂತನು ಆರೋಗ್ಯ, ಐಶ್ವರ್ಯಗಳನ್ನು ದಯಪಾಲಿಸಲೆಂದು ಹಾರೈಸುತ್ತೇನೆ.

1. ಅಧ್ಯಕ್ಷರ ಅಪ್ಪಣೆ ಮೇರೆಗೆ ಪ್ರಸ್ತಾಪಿಸಲಾದ ವಿಷಯಗಳು.

(ಗೊಂದಲ)

ವಿಷಯ : ಸಿಡ್ನಿ ಮಾದರಿಯಲ್ಲಿ ಬೆಂಗಳೂರನ್ನು ಬ್ಲಾಸ್ಟ್ ಮಾಡುತ್ತೇವೆಂದು ಪತ್ರಿಕೆಯಲ್ಲಿ ವರದಿ ಬಂದಿರುವ ಬಗ್ಗೆ.

ಶ್ರೀ ಎಂ. ಕೃಷ್ಣಾರೆಡ್ಡಿ : ಮಾನ್ಯ, ಅಧ್ಯಕ್ಷರೆ, ಕಳೆದ 6-7 ತಿಂಗಳುಗಳಿಂದ 7-8 ಬಾರಿ ಪೆಟ್ರೋಲ್, ಡೀಸೆಲ್ ದರ ಕಡಿಮೆ ಮಾಡಿದ್ದರೂ ರಾಜ್ಯ ಸರ್ಕಾರ ಬಸ್ ದರ ಕಡಿಮೆ ಮಾಡಿರುವುದಿಲ್ಲ.

(ಗೊಂದಲ)

ಶ್ರೀ ಹೆಚ್.ಡಿ. ರೇವಣ್ಣ : ಮಾನ್ಯ ಅಧ್ಯಕ್ಷರೆ, ನಿಲುವಳಿ ಸೂಚನೆಯನ್ನು ಕೊಟ್ಟಿದ್ದೇನೆ.

(ಗೊಂದಲ)

ಅಧ್ಯಕ್ಷರು : ಒಬ್ಬೊಬ್ಬರಾಗಿ ಮಾತನಾಡಿ.

(ಗೊಂದಲ)

ಶ್ರೀ ಆರ್. ಅಶೋಕ್ : ಮಾನ್ಯ ಅಧ್ಯಕ್ಷರೆ, ಸಿಡ್ನಿ ಮಾದರಿಯಲ್ಲಿ ಬೆಂಗಳೂರನ್ನು Blast ಮಾಡುತ್ತೇವೆಂದು ಹೇಳಿದ್ದಾರೆ.

(ಗೊಂದಲ)

ಅಧ್ಯಕ್ಷರು : ಯಾರಿಗೆ ಅವಕಾಶ ಕೊಡಬೇಕೆಂಬುದನ್ನು ನೀವೇ ಹೇಳಿ.

(ಅಧ್ಯಕ್ಷರು)

ಶ್ರೀ ಎಂ. ಕೃಷ್ಣಾರೆಡ್ಡಿ : ಮಾನ್ಯ ಅಧ್ಯಕ್ಷರೆ, ಕಳೆದ 6–7 ತಿಂಗಳುಗಳಿಂದ ಪೆಟ್ರೋಲ್, ಡೀಸೆಲ್ ಬೆಲೆ ಕಡಿಮೆ ಮಾಡಿದ್ದರೂ ರಾಜ್ಯ ಸರ್ಕಾರ ಪ್ರಯಾಣ ದರ ಕಡಿಮೆ ಮಾಡಿರುವುದಿಲ್ಲ; ಇದು ಬಹಳ ಗಂಭೀರವಾದಂತಹ ವಿಚಾರವಾಗಿರುವುದರಿಂದ ಮೊದಲಿಗೆ ಚರ್ಚೆಗೆ ತೆಗೆದುಕೊಳ್ಳಬೇಕು.

(ಗೊಂದಲ)

ಅಧ್ಯಕ್ಷರು : ತಾವೆಲ್ಲರೂ ಹೀಗೆಲ್ಲಾ ಮಾತನಾಡಬಾರದು. ನೀವೇನಾದರೂ ಪ್ರಶ್ನೆ ಮಾಡುವುದಾದರೆ ಬರೆದು ಕಳುಹಿಸಬೇಕು. ನೀವೇ ಎದ್ದು ನಿಂತು ಮಾತನಾಡಿದರೆ ಸದನ ನಡೆಸುವುದಕ್ಕೆ ಆಗುತ್ತದೆಯೇ ?

(ಗೊಂದಲ)

ಒಬ್ಬ ಮಾನ್ಯ ಸದಸ್ಯರು : ಸೂಳೆಕೆರೆಯಲ್ಲಿ ಬಸ್ ಬಿದ್ದು. .

(ಗೊಂದಲ)

ಅಧ್ಯಕ್ಷರು: ಆಯಿತು, ಎಲ್ಲರಿಗೂ ಅವಕಾಶ ಕೊಡೋಣ. ಸ್ವಲ್ಪ ಕುಳಿತುಕೊಳ್ಳಿ.

(ಗೊಂದಲ)

ಶ್ರೀ ಆರ್. ಅಶೋಕ್ : ಮಾನ್ಯ ಅಧ್ಯಕ್ಷರೆ, ತಮ್ಮಲ್ಲಿ ಈಗಾಗಲೇ ವಿನಂತಿ ಮಾಡಿರುತ್ತೇನೆ. ಬೆಂಗಳೂರು ಭಯದ ವಾತಾವರಣದಲ್ಲಿದೆ.

ಅಧ್ಯಕ್ಷರು : ಏಕೆ ?

(ಗೊಂದಲ)

ಶ್ರೀ ಆರ್. ಅಶೋಕ್ : ಸಿಡ್ನಿ ಮಾದರಿಯಲ್ಲಿ ಬೆಂಗಳೂರನ್ನು Blast ಮಾಡುತ್ತೇವೆಂದು ಹೇಳಿದ್ದಾರೆ. ಈ ಬಗ್ಗೆ ನಾನು ಹೇಳುತ್ತಿಲ್ಲ. ಇಡೀ ಮಾಧ್ಯಮದಲ್ಲಿ, ಎಲ್ಲಾ ಪೇಪರ್‌ನಲ್ಲಿ ವಿಷಯ ಬಂದಿರುತ್ತದೆ. ಚಾನೆಲ್‌ನಲ್ಲಿ ಅರ್ಧ ಗಂಟೆಗಳ ಕಾಲ, ಒಂದು ಗಂಟೆಗಳ ಕಾಲ, ನಾಳೆ ಬೆಂಗಳೂರು Blast ಆಗುತ್ತದೆಂದು ಹೇಳುತ್ತಿದ್ದಾರೆ. ಹೀಗಾದರೆ Office ಗೆ ಹೋಗುವವರ ಕಥೆ ಏನು ? ಶಾಲಾ–ಕಾಲೇಜುಗಳಿಗೆ ಹೋಗುವ ಮಕ್ಕಳ ಗತಿ ಏನು ?

(ಗೊಂದಲ)

ಶ್ರೀ ಜಗದೀಶ್ ಶೆಟ್ಟರ್ : ಸರ್ಕಾರ ಧೈರ್ಯ ಕೊಡುವಂತಹ ಒಂದು statement ಅನ್ನು ಮಾಡಬೇಕು.

(ಗೊಂದಲ)

ಶ್ರೀ ಆರ್. ಅಶೋಕ್: ಮೆಹದಿ ಎನ್ನುವವರನ್ನು ಈಗಾಗಲೇ ಬಂಧಿಸಿರುತ್ತಾರೆ. ಆತನನ್ನು ಬಂಧಿಸಿರುವ ಹಿನ್ನೆಲೆಯಲ್ಲಿ ಬೆಂಗಳೂರು Blast ಮಾಡುತ್ತೇವೆಂದು ಹೇಳಿದ್ದಾರೆ. ಈ ರೀತಿಯ ಘಟನೆ ಸಿಡ್ನಿಯಲ್ಲಿಯೂ ಸಹ ನಡೆದಿದೆ. ನಮ್ಮಲ್ಲೂ ಆ ರೀತಿ ಆಗಬಾರದೆಂಬ ಹಿನ್ನೆಲೆಯಲ್ಲಿ ಜನಗಳಿಗೆ ಒಂದು ಸಂದೇಶ ಹೋಗಬೇಕು. ಅಧಿವೇಶನ ನಡೆಯುತ್ತಿದ್ದು, ಈ ರೀತಿಯ ಘಟನೆ ಆಗಿರುವುದರಿಂದ ಬೆಂಗಳೂರಿನ ಜನರಿಗೆ ಭಯ ಬಂದಿದೆ. ಎಲ್ಲಾ ಮಾಧ್ಯಮದಲ್ಲಿ ವಿಷಯ ಪ್ರಸಾರವಾದ ಕಾರಣದಿಂದ ದಯಮಾಡಿ ಸರ್ಕಾರ ಒಂದು ಸ್ಟೇಟ್‌ಮೆಂಟ್ ಅನ್ನು ಮಾಡಲಿ.

ಅಧ್ಯಕ್ಷರು : ಸಾಕು, ಸಾಕು.

(ಗೊಂದಲ)

ಶ್ರೀ ಆರ್. ಅಶೋಕ್ : ಮಾನ್ಯ ಮುಖ್ಯಮಂತ್ರಿಗಳೇ ನನಗೇನು ಉತ್ತರ ಬೇಕಾಗಿಲ್ಲ. ಒಂದು ಸ್ಟೇಟ್‌ಮೆಂಟ್ ಮಾಡಿದರೆ ಸಾಕು.

(ಗೊಂದಲ)

ಶ್ರೀ ಸಿದ್ದರಾಮಯ್ಯ (ಮಾನ್ಯ ಮುಖ್ಯಮಂತ್ರಿಗಳು) : ಮಾನ್ಯ ಗೃಹ ಸಚಿವರು ಕೊಡುತ್ತಾರೆ.

(ಗೊಂದಲ)

ಶ್ರೀ ಕೆ.ಜೆ. ಜಾರ್ಜ್ (ಮಾನ್ಯ ಗೃಹ ಸಚಿವರು) : ಮಾನ್ಯ ಅಧ್ಯಕ್ಷರೆ, ವಿವರವಾದ ಉತ್ತರವನ್ನು ತರಿಸಿ ಕೊಡಲಾಗುವುದು. ಸ್ಟೇಟ್‌ಮೆಂಟ್ ಮಾಡುತ್ತೇವೆ.

(ಗೊಂದಲ)

ಅಧ್ಯಕ್ಷರು : ಆಯಿತು.

2. ವಿಷಯ : ಬಗರ್ ಹುಕುಂ ನಲ್ಲಿ ಇರತಕ್ಕ ರೈತರನ್ನು ಒಕ್ಕಲೆಬ್ಬಿಸುವ ಬಗ್ಗೆ.

ಶ್ರೀ ಗೋವಿಂದ ಎಂ. ಕಾರಜೋಳ (ಮುಧೋಳ) : ಮಾನ್ಯ ಅಧ್ಯಕ್ಷರೆ, ನಿನ್ನೆಯ ದಿವಸ ಬಾಗಲಕೋಟೆ ಜಿಲ್ಲೆಯ ಮುಧೋಳ ತಾಲ್ಲೂಕಿನ ರೈತರನ್ನು ವಿನಾಕಾರಣ ಸರ್ಕಾರ ಅರೆಸ್ಟ್ ಮಾಡಿರುತ್ತದೆ.

(ಗೊಂದಲ)